ಅನುಮತಿಯನ್ನು ಕೊಟ್ಟಿದ್ದೇವೆ. ಅವು ಪ್ರತ್ಯೇಕವಾದಂಥ ಗ್ರಾಮ ಪಂಚಾಯಿತಿಗಳಾಗುತ್ತವೆ. ಅದೇರೀತಿ ಶಿವಮೊಗ್ಗ ತಾಲ್ಲೂಕಿನ ಅನುಪಿನ ಕಟ್ಟೆ, ಗೌಡ್ರಹಳ್ಳಿ ಮತ್ತು ದೇವರಹಳ್ಳಿ ಗ್ರಾಮಗಳನ್ನು ಈಗಾಗಲೇ ಅಸ್ತಿತ್ವದಲ್ಲಿರುವಂಥ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿಸಲು 2ನೇ ತಿದ್ದುಪಡಿ ಅಧಿನಿಯಮ 97ರ ಮೇರೆಗೆ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ 18-12-97ರಲ್ಲಿಯೇ ನಾವು ಆದೇಶವನ್ನು ಕೊಟ್ಟಿದ್ದೇವೆ. ಪ್ರಾಯಶಃ ಈ ಆದೇಶ ಹೊರಡಿಸಿದ ನಂತರ, 7-3-98ರಂದು ಅವರು ತಿಳಿಸಿರುತ್ತಾರೆ. ಈ ಬಗ್ಗೆ ಕೂಡಲೇ ಆದೇಶ ಹೊರಡಿಸಿರುವುದಾಗಿ ಜಿಲ್ಲಾಧಿಕಾರಿಗಳು 7-3-98ರಂದು ನಮಗೆ ತಿಳಿಸಿದ್ದಾರೆ. ಅಂದರೆ ಈ ಎಲ್ಲಾ ಗ್ರಾಮಗಳು, ತಮ್ಮ ತಾಲ್ಲೂಕಿನಲ್ಲಿರುವಂಥ ಈ ಗ್ರಾಮಗಳು ಮತ್ತು ಭದ್ರಾವತಿ ತಾಲ್ಲೂಕಿನಲ್ಲಿರತಕ್ಕಂಥ ಗ್ರಾಮಗಳನ್ನು, ಗ್ರಾಮಪಂಚಾಯಿತಿಗಳಾಗಿ ಕೆಲವನ್ನು ಪರಿವರ್ತಿಸಬೇಕು ಕೆಲವು ಗ್ರಾಮಗಳನ್ನು ಹಾಲಿ ಅಸ್ತಿತ್ವದಲ್ಲಿರತಕ್ಕಂಥ ಗ್ರಾಮ ಪಂಚಾಯಿತಿಗಳಿಗೆ ಸೇರಿಸಬೇಕೆಂಬ ಕ್ರಮ ಕೈಗೊಂಡಿದ್ದೇವೆ. ಇವುಗಳು ಅಸ್ತಿತ್ವದಲ್ಲಿ ಬಂದಿರುತ್ತವೆ. ಆ ಗ್ರಾಮ ಪಂಚಾಯಿತಿಗಳವರು ಅಲ್ಲಿಯ ಅಭಿವೃದ್ಧಿ ಕೆಲಸಕಾರ್ಯಗಳನ್ನು ಕೈಗೊಳ್ಳುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಅವರು ಯಾವತ್ತು ಆದೇಶ ಹೊರಡಿಸಿದ್ದಾರೋ, ಬಿಡುತ್ತಾರೋ ಗೊತ್ತಿಲ್ಲ. ಈ ಆದೇಶ ಬರುವತನಕ ಈ ಹಳ್ಳಿಗೋಸ್ಕರ ಮತ್ತು ಇನ್ನೂ ಕೆಲವು ಹಳ್ಳಿಗಳು ಇವೆ. ಶಿವಮೊಗ್ಗ ತಾಲ್ಲೂಕಿನಲ್ಲಿ ಇಂದಿರಾನಗರ, ಶ್ರೀರಾಮನಗರ ಈ ತರಹ ಹಳ್ಳಿಗಳು ಇವೆ. ಈ ಹಳ್ಳಿಗಳ ಹೆಸರುಗಳನ್ನು ಬಿಟ್ಟಿದ್ದೀರಿ, ಈ ರೀತಿ ರಾಜ್ಯದಲ್ಲಿ ಬಿಟ್ಟಿರತಕ್ಕ ಹಳ್ಳಿಗಳು ಜಾಸ್ತಿ ಇವೆ. ತಮ್ಮ ಆದೇಶದ ಪ್ರಕಾರ ಜಿಲ್ಲಾಧಿಕಾರಿಗಳು ಯಾವುದಕ್ಕೆ ಸೇರಿಸುತ್ತಾರೋ ಬಿಡುತ್ತಾರೋ ಆ ದಿಕ್ಕಿನಲ್ಲಿ ಪ್ರಯತ್ನ ನಡೆಯುತ್ತಾ ಇರಲಿ. ಅಲ್ಲಿಯತನಕ ಆ ಹಳ್ಳಿಗಳಿಗೆ ವಿಶೇಷ ಅನುದಾನವನ್ನು ಜಿಲ್ಲಾಧಿಕಾರಿಗಳ ಮುಖಾಂತರ ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿ, ಅವರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಅನುಮತಿಯನ್ನು ಕೊಟ್ಟಿರುವುದರಿಂದ, ಮತ್ತು ಆದೇಶ ಹೊರಡಿಸಿರುವುದರಿಂದ ಪ್ರಾಯಶಃ ಇನ್ನು 2-3 ದಿವಸಗಳಲ್ಲಿ ಆ ಕ್ರಮ ಆಗಬಹುದು ಅಥವಾ ಈ ಕೂಡಲೇ ನಾವು ಬರೆಯುತ್ತೇವೆ; ಈ ತಿಂಗಳೊಳಗಾಗಿ ಆಗಬಹುದು. ಒಂದುವೇಳೆ ಆಗದೇ ಇದ್ದರೆ, ನೀವು ಹೇಳಿದಂತೆ, ವಿಶೇಷ ಅನುದಾನವನ್ನು ಕೊಡುವಂಥ ರೀತಿಯಲ್ಲಿ ನಾವು ಯೋಚನೆಯನ್ನು ಮಾಡುತ್ತೇವೆ ಕ್ರಮ ಕೈಗೊಳ್ಳುತ್ತೇವೆ.

ಅನುದಾನರಹಿತ ಪ್ರೌಢಶಾಲೆಗಳಲ್ಲಿ ಶಿಕ್ಷಕರಿಗೆ ಸರ್ಕಾರಿ ನೇಮಕಾತಿಯಲ್ಲಿ ಅನುಸರಿಸುವ ನೀತಿ.

ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ): ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಸರಕಾರಿ ನೇಮಕಾತಿಯಲ್ಲಿ ಯಾವ ನೀತಿಯನ್ನು ಅನುಸರಿಸಲಾಗುತ್ತಿದೆ?

ಆ) ಗಡಿನಾಡ ಕನ್ನಡಿಗರು ಪ್ರೌಢಶಾಲೆ ಶಿಕ್ಷಕರ ತರಬೇತಿ (ಬಿಎಡ್) ಪಡೆದವರಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆಯೇ?

ಇ) 1997-98ನೇ ಸಾಲಿನಲ್ಲಿ ದ.ಕ.ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಕರ ನೇಮಕಾತಿ ಮಾಡಲಾಗಿದೆಯೇ? ನೇಮಕಾತಿಯ ಮಾನದಂಡಗಳಾವು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ಸೇವೆಸಲ್ಲಿಸುತ್ತಿರುವ ಶಿಕ್ಷಕರು ನೇಮಕಾತಿಯ ಸಮಯದಲ್ಲಿ ತಮ್ಮ ಹೆಸರುಗಳನ್ನು ಉದ್ಯೋಗ ವಿನಿಮಯ ಕಛೇರಿಯಲ್ಲಿ ನೋಂದಾಯಿಸಿದ್ದಲ್ಲಿ, ಅವರ ಪ್ರಕರಣಗಳನ್ನು ಇತರ ಅರ್ಹ ಅಭ್ಯರ್ಥಿಗಳ ಜೊತೆ ಪರಿಗಣಿಸಿ ಅರ್ಹತೆ ಮತ್ತು ಮೀಸಲಾತಿ ನಿಯಮಗಳನ್ವಯ ಆಯ್ಕೆಗೆ ಪರಿಗಣಿಸಲಾಗುವುದು.

ಆ) ಇಲ್ಲ.

ಇ) 1997-98ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಈ ನೇಮಕಾತಿಗಳಿಗೆ ಮಾನದಂಡ ಅರ್ಹತೆ ಮತ್ತು ಮೀಸಲಾತಿ.

12. 10 ಪಿ.ಎಂ

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಅಧ್ಯಕ್ಷರೇ, ನನ್ನ ಪಕ್ಷದ ಕ್ಷೇತ್ರ ಮತ್ತು ರಾಜ್ಯದ ಗಡಿಯಲ್ಲಿರುವ ಕೇರಳ ಗಡಿನಾಡ ಕನ್ನಡಿಗರಿಗೆ ಪ್ರೌಢಶಾಲಾ ಶಿಕ್ಷಕರ ತರಬೇತಿಯಲ್ಲಿ ಮತ್ತು ಕೆಲಸದಲ್ಲಿ ವಿನಾಯಿತಿಯನ್ನು ಕೊಡುತ್ತೀರಾ ಎಂದು ನಾನು ಪ್ರಶ್ನೆ ಕೇಳಿದರೆ ಅದಕ್ಕೆ ಸರ್ಕಾರ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿಯ ಕನ್ನಡಿಗರ ಸಮಸ್ಯೆ ಅಂದರೆ ಕೇರಳ ಪಕ್ಕದ ಮಂಜೇಶ್ವರ ಮತ್ತು ಕಾಸರಗೋಡಿನಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಕೇರಳದಲ್ಲಿ ಯಾವುದೇ ಕೆಲಸವನ್ನು ಕೊಡುತ್ತಿಲ್ಲ. ಕರ್ನಾಟಕದಲ್ಲಿ ಅವರಿಗೆ ಕೆಲಸದಲ್ಲಿ ಮೀಸಲಾತಿ ಇಲ್ಲದಿದ್ದರೆ ಅವರಿಗೆ ಕೆಲಸದ ವಿಚಾರದಲ್ಲಿ ತೊಂದರೆ ಆಗುತ್ತದೆ ಎನ್ನುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ. ತಾವು ಬಹಳಷ್ಟು ಸಲ ಹೇಳಿದ್ದೀರಿ,

ಗಡಿನಾಡ ಕನ್ನಡಿಗರಿಗೆ ನಾವು ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೀರಿ. ಈ ಬಗ್ಗೆ ತಾವು ಏನಾದರೂ ವ್ಯವಸ್ಥೆ ಮಾಡಿಕೊಡುತ್ತೀರಾ? ಮತ್ತು ಗಡಿನಾಡ ಕನ್ನಡಿಗರಿಗೆ ಮೀಸಲಾತಿ ಕೊಡುವುದು ನಮ್ಮ ಕರ್ನಾಟಕ ರಾಜ್ಯದ ಕರ್ತವ್ಯ ಕೂಡ. ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಸಧ್ಯದ ಪರಿಸ್ಥಿತಿಯಲ್ಲಿ ಅವರಿಗೆ ಯಾವುದೇ ರೀತಿಯ ಮೀಸಲಾತಿ ಮಾಡಿಲ್ಲ. ಅವರು ಉದ್ಯೋಗ ವಿನಿಮಯ ಕಛೇರಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾವಣೆ ಮಾಡಿಕೊಂಡು ಸಾಮೂಹಿಕವಾಗಿ ಬರಬೇಕು. ನಾವು ಈಗ 30 ಸಾವಿರ ಜನ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದರಲ್ಲಿ ಮೆರಿಟ್ ಮತ್ತು ಮೀಸಲಾತಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಅದರಲ್ಲಿ ಅವರೂ ಸಹ ಬರಬಹುದು. ಮಾನ್ಯ ಸದಸ್ಯರು ಏನು ಕೇಳಿದ್ದಾರೆ ಆ ರೀತಿ ಗಡಿನಾಡ ಕನ್ನಡಿಗರಿಗೆ ಮೀಸಲಾತಿಯ ಅವಕಾಶ ಮಾಡಿ ಕೊಟ್ಟಿಲ್ಲ. ಇನ್ನು 15 ದಿವಸದಲ್ಲಿ ನಮ್ಮ ಎಲ್ಲಾ ಪ್ರಕ್ರಿಯೆ ಪೂರೈಸುತ್ತದೆ ಈ ಉಪಾಧ್ಯಾಯರ ನೇಮಕ ಮಾಡಿಕೊಳ್ಳುವುದಕ್ಕೆ. ಶಿಕ್ಷಕರ ವರ್ಗಾವಣೆ ಆಗುವಂತಹ ಕಾರ್ಯಕ್ರಮ ಬರುತ್ತದೆ ಮತ್ತು ಅದರ ಜೊತೆಯಲ್ಲಿಯೇ ಈ 30 ಸಾವಿರ ಜನ ಉಪಾಧ್ಯಾಯರ ನೇಮಕ ಆಗುತ್ತದೆ. ಮಾನ್ಯ ಸದಸ್ಯರ ಸಲಹೆ ಏನು ಇದೆ ಅದನ್ನು ಮುಂದೆ ಪರಿಶೀಲನೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಗಡಿನಾಡಿನಲ್ಲಿರತಕ್ಕಂಥವರಿಗೆ ವಿಶೇಷವಾಗಿ ಸರ್ಕಾರಿ ಆದ್ಯತೆ ಮೇಲೆ ಮೀಸಲಾತಿಯನ್ನು ರೂಪಿಸತಕ್ಕಂಥಾದ್ದು ಸರ್ಕಾರ ಒಂದು ನೀತಿಯನ್ನಾಗಿ ಮಾಡಬೇಕು. ಅದು ನಮ್ಮ ಒತ್ತಾಯ. ಅದು ಏಕೆ ಮಾಡುವುದಿಲ್ಲ, ಈಗ ಅಲ್ಲಿ ಏನಾಗಿದೆ ಅಂದರೆ, ಅಲ್ಲಿ ಕನ್ನಡ ಶಾಲೆಗಳು ಇಲ್ಲ. ಅಲ್ಲಿ ಪ್ರೌಢಶಾಲೆಗಳು ಇಲ್ಲ. ಅಲ್ಲಿ ಕನ್ನಡಿಗರಿಗೆ ಉದ್ಯೋಗ ಸಿಗುವುದಿಲ್ಲ. ಯಾವುದೋ ಕಾರಣದಿಂದ ಕಾಸರಗೋಡು ಕರ್ನಾಟಕ ರಾಜ್ಯಕ್ಕೆ 1956ನೇ ಇಸವಿಯಲ್ಲಿ ಸೇರಲಿಲ್ಲ. ಆದ್ದರಿಂದ ನಾನು ತಮಗೆ ಏನು ಹೇಳುತ್ತೇನೆ ಅಂದರೆ, ಸರ್ಕಾರ ದಯಮಾಡಿ ಇದನ್ನು ಒಂದು ನೀತಿ ಎಂದು ಮಾಡಿ ಸರ್ಕಾರದಲ್ಲಿ ತಾವು ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ಮೀಸಲಾತಿಯನ್ನು ಇಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಚ್.ಜಿ.ಗೋವಿಂದೇಗೌಡ: ಸದ್ಯದ ಪರಿಸ್ಥಿತಿಯಲ್ಲಿ ಅದಕ್ಕೆ ಅವಕಾಶ ಇಲ್ಲ. ಮುಂದೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೇ, ಹಿಂದೆ ಒಮ್ಮೆ ನಾನು ಈ ಮಾತು ಹೇಳಿದ್ದೆ. ಕಾಸರಗೂಡು ಕನ್ನಡಿಗರು ಏನು ಇದ್ದಾರೆ ಅವರು ಕನ್ನಡ ಕಲಿಯುವುದನ್ನೇ ಬಿಡುತ್ತಿದ್ದಾರೆ ಇದನ್ನು ತಾವು ಗಮನಿಸಬೇಕು. ಕನ್ನಡ ಕಲಿತರೆ ಕೇರಳದವರು ಕೆಲಸ

ಕೊಡುವುದಿಲ್ಲ. ಈ ಕಡೆ ಅವರು ಕೇರಳದವರು ಎಂದು ಕರ್ನಾಟಕದಲ್ಲಿ ಅವರಿಗೆ ಕೆಲಸ ಕೊಡುವುದಿಲ್ಲ. ನಮ್ಮ ಮಕ್ಕಳು ನಮ್ಮ ಸಂಬಂಧಿಗಳು 4ನೇ ತರಗತಿಯವರೆಗೂ ಅಲ್ಲಿ ಮಲೆಯಾಳಿ ಕಲಿಯುತ್ತಿದ್ದಾರೆ. ಕನ್ನಡಿಗರಿಗೆ ಏನೂ ಭದ್ರತೆ ಇಲ್ಲ, ಮೀಸಲಾತಿ ಇಲ್ಲ, ಕರ್ನಾಟಕ ವಿಶಾಲ ಎಂದು ಹೇಳುತ್ತೀರಿ. ಕನ್ನಡ ಸಮ್ಮೇಳನಕ್ಕೆ ಕಾಸರಗೋಡಿನವರನ್ನು ಅಧ್ಯಕ್ಷರನ್ನಾಗಿ ಮಾಡುತ್ತೀರಿ, ಈ ರೀತಿ ಕಣ್ಣು ಹೊರೆಸುವ ತಂತ್ರಬೇಡ. ವ್ಯವಹಾರಿಕವಾಗಿ ತಾವು ಏನು ಮಾಡುತ್ತೀರಿ ಅದನ್ನು ಹೇಳಿ. ಕನ್ನಡಿಗರನ್ನು ಬದುಕುವುದಕ್ಕೆ ಬಿಡಿ, ಕನ್ನಡ ಬದುಕುವುದಕ್ಕೆ ಬಿಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಕನ್ನಡ ಬದುಕುವುದಕ್ಕೋಸ್ಕರವೇ ಕನ್ನಡ ಉಪಾಧ್ಯಾಯರುಗಳನ್ನು ನೇಮಕ ಮಾಡುತ್ತಿರುವುದು. ಇಂಗ್ಲೀಷ್‌ನವರನ್ನು ಮಾಡುತ್ತಿಲ್ಲ ಕನ್ನಡದವರನ್ನೇ ನೇಮಕ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಗಡಿನಾಡ ಕನ್ನಡಿಗರು ನಾಶವಾಗುತ್ತಿದ್ದಾರೆ. ಇದು ಬಹಳ ಶೋಚನೀಯವಾದ ಸಂಗತಿ. ಇದರ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಬೇಕು.

ಅಧ್ಯಕ್ಷರು: ಅವರ ಸಲಹೆಯನ್ನು ತೀವ್ರವಾಗಿ ಪರಿಶೀಲಿಸುತ್ತೇನೆಂದು ಹೇಳಿ.

ಶ್ರೀ ಎಚ್.ಜಿ.ಗೋವಿಂದೇಗೌಡ: ಪರಿಶೀಲಿಸುತ್ತೇವೆ.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡಲಾದ ವಿದ್ಯಾರ್ಥಿಗಳ ಸಂಖ್ಯೆ

29 (9)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1997-98ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ನೀಡಲಾದ ಪ್ರವೇಶಗಳೆಷ್ಟು?

2) ಸಿ.ಇ.ಟಿ. ನಂತರ ಉಚಿತ ಪ್ರವೇಶ ಪಡೆದ ವೈದ್ಯಕೀಯ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ ನೀಡುವುದು.

3) ವೃತ್ತಿಪರ ಶಿಕ್ಷಣ ಪ್ರವೇಶ ನೀಡುವಲ್ಲಿ ಆಗುತ್ತಿರುವ ಪ್ರಾದೇಶಿಕ ತಾರತಮ್ಯ ನಿವಾರಿಸಲು ಕಂದಾಯ ವಿಭಾಗವಾರು ಇಲ್ಲವೇ, ವಿಶ್ವ ವಿದ್ಯಾನಿಲಯವಾರು ಪ್ರವೇಶ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?